ದಿನದ ಪಟ್ಟಿಯಲ್ಲಿ ಸೇರಿಸಲಾದಪ್ರಶ್ನೆಗಳ ಪಟ್ಟಿ

ಲಕ್ಷ್ಮೇಶ್ವರದಲ್ಲಿ ಶ್ರೀ ಸೋಮೇಶ್ವರ ರೈತರುಗಳ ಸಹಕಾರಿ ನೂಲಿನ ಗಿರಣಿಯಲ್ಲಿ ಹಣದ ದುರುಪಯೋಗ.

ಶ್ರೀ ಬಾಳಿಕಾಯಿ ತಿಪ್ಪಣ್ಣ ಬಸವಣ್ಣಪ್ಪ (ಶಿರಹಟ್ಟಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರದಲ್ಲಿ ಶ್ರೀ ಸೋಮೇಶ್ವರ ರೈತ ಸಹಕಾರಿ ನೂಲಿನ ಗಿರಣಿ ಸಂಸ್ಥೆ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ ಶ್ರೀ ಸೋಮೇಶ್ವರ ರೈತ ಸಹಕಾರಿ ನೂಲಿನ ಗಿರಣಿ ನಿಯಮಿತಕ್ಕೆ ಸರ್ಕಾರದವರು ನೀಡಿರುವ ಶೇರು ಹಣವೆಷ್ಟು ?

ಇ) ಕೇಂದ್ರ ಸರ್ಕಾರದಿಂದ ಯೇಲ್ಕಂಡ ಗಿರಣಿಗೆ ಧನ ಸಹಾಯವಾಗಿದೆಯೇ

ಈ) ಸದರಿ ಸಹಕಾರಿ ನೂಲಿನ ಗಿರಣಿ ಸಂಸ್ಥೆಯಲ್ಲಿ ಹಣದ ದುರುಪಯೋಗ ಆದದ್ದು ಕಂಡು ಬಂದಿದೆಯೇ ?

ಉ) ಹಾಗಿದ್ದಲ್ಲಿ ಸರ್ಕಾರದವರು ಸಂಬಂಧ ಪಟ್ಟವರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ?

ಶ್ರೀ ಆರ್. ಎಲ್. ಜಾಲಪ್ಪ.—(ಮಾನ್ಯ ಸಹಕಾರಿ ಸಚಿವರು.(

ಅ) ಹೌದು. ಅಲ್ಲಿ ನೂಲಿನ ಗಿರಣಿ ಸ್ಥಾಪನೆಯಾಗುತ್ತಿದೆ.

ಆ) ರೂ. ೩,೩೭೮ ಕೋಟಿಗಳು.

ಇ) ಕೇಂದ್ರ ಸರ್ಕಾರದಿಂದ ಯಾವುದೇ ಧನ ಸಹಾಯ ಇಲ್ಲಿಯವರೆಗೆ ನೀಡಲಾಗಿಲ್ಲ.

ಈ) ಸರ್ಕಾರದ ಗಮನಕ್ಕೆ ಈ ತರಹದ ಪ್ರಕರಣ ತಿಳಿದು ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

ಬದಲಿ ಪಟೇಲರುಗಳಿಗೆ ವಿಶ್ರಾಂತಿ ವೇತನದ ಪಾವತಿ.

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಾಜಿ ಪಟೇಲರಿಗೆ ೧೦೦ ರೂಪಾಂತೆ ಮಾಸಾಶನ ನೀಡುವುದಾಗಿ ಸರ್ಕಾರದವರು ಘೋಷಿಸಿದ್ದು ಬದಲಿ ಪಟೇಲರಿಗೆ ಸುಮಾರು ೨೫ ವರ್ಷಗಳಿಗೂ ಮಿಕ್ಕಿದುಂಡಿದವರಿಗೆ ಈ ಘೋಷಣೆ ಅನ್ವಯವಾಗದಿರುವುದಕ್ಕೆ ಕಾರಣವೇನು ?

ಆ) ಇನ್ನು ಮುಂದಾದರೂ ಬದಲಿ ಪಟೇಲರಾಗಿ ದುಡಿದವರಿಗೆ ಮಾಶಾಸನ ಕೊಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಅನುವಂಶೀಯ ಹುದ್ದೆಗಳನ್ನು ಕಳೆದುಕೊಂಡ ಮಾಜಿ ಪಟೇಲರಿಗೆ ಮಾತ್ರ ಹಲವು ಪರತ್ತುಗಳಿಗೊಳಪಟ್ಟು ೧೫-೮-೮೪ ರಿಂದ ೧೦೦ ರೂ ಗಳ ಮಾಸಿಕ ಅನುಕಂಪ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಆದ್ದರಿಂದ ಬದಲಿ ಪಟೇಲರೊಳಗೊಂಡಂತೆ ಹಲವು ವರ್ಗದ ಪಟೇಲರಿಗೆ ಈ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವಿಲ್ಲ.

ಆ) ಮೇಲೆ ಕೊಟ್ಟ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.